# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 308
ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ )
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು
ಉತ್ತರಿಸುವ ದಿನಾಂಕ : 06.12.2023

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕೊಡಗು ಜಿಲ್ಲೆಯಲ್ಲಿ ಪೌತಿ ಖಾತೆಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; ಪೌತಿ ಖಾತೆ ಮಾಡಿಸಲು ಇರುವ ಷರತ್ತುಗಳೇನು; (ತಾಲ್ಲೂಕುವಾರು ವಿವರ ನೀಡುವುದು)</td><td>ಕೊಡಗು ಜಿಲ್ಲೆಯಲ್ಲಿ ಪೌತಿ ಖಾತೆ ಬದಲಾವಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಅರ್ಜಿಗಳು ಸಲ್ಲಿಕೆಯಾಗಿರುತ್ತದೆ:
<table>
<tr><th>ಕ್ರ.ಸಂ.</th><th>ತಾಲ್ಲೂಕು</th><th>ಅರ್ಜಿಗಳ ಸಂಖ್ಯೆ</th></tr>
<tr><td>1</td><td>ಮಡಿಕೇರಿ</td><td>1907</td></tr>
<tr><td>2</td><td>ವಿರಾಜಪೇಟೆ</td><td>1649</td></tr>
<tr><td>3</td><td>ಸೋಮವಾರಪೇಟೆ</td><td>2308</td></tr>
<tr><td>4</td><td>ಕುಶಾಲನಗರ</td><td>1361</td></tr>
<tr><td>5</td><td>ಪೊನ್ನಂಪೇಟೆ</td><td>1324</td></tr>
<tr><td colspan="2">ಒಟ್ಟು</td><td>8549</td></tr>
</table>
ಪೌತಿ ಖಾತೆ ಮಾಡಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 33 ಟಿಆರ್ ಎಂ 2019 ದಿನಾಂಕ:17.10.2020ರಂತೆ ಕೆಳಕಂಡ ದಾಖಲಾತಿಗಳನ್ವಯ ಕ್ರಮವಹಿಸಲಾಗುತ್ತಿದೆ:<br>
1. ಖಾತೆದಾರನ ಮರಣ ದೃಢೀಕರಣ ಪತ್ರ/ಒಂದು ವೇಳೆ ಮರಣ ದೃಢೀಕರಣ ಲಭ್ಯವಿಲ್ಲದ್ದಿದಲ್ಲಿ ಆಧಾರ್ ಮತ್ತು ಪಡಿತರ ಚೀಟಿ ದಾಖಲೆಗಳನ್ನು ಪರಿಶೀಲಿಸಿಕೊಂಡು ಗ್ರಾಮ ಆಡಳಿತ ಅಧಿಕಾರಿ ಮತ್ತು ರಾಜಸ್ವ ನಿರೀಕ್ಷಕರು ಸ್ಥಳ ತನಿಖೆ/ಮಹಜರು ಮಾಡಿ ಖಾತೆದಾರರು ಮರಣ ಹೊಂದಿರುವ ಬಗ್ಗೆ ಸಂಬಂಧಪಟ್ಟ ವಾರಸುದಾರರಿಂದ ಅಫೀಡವಿಟ್ ನ್ನು ಪಡೆದು ಅವರುಗಳ ಪಡಿತರ ಚೀಟಿ ಮತ್ತು ಆಧಾರ್ ದಾಖಲೆಗಳನ್ನು ಪಡೆದುಕೊಳ್ಳುವುದು.<br>
2. ಆರ್.ಡಿ. ಸಂಖ್ಯೆಯುಳ್ಳ ವಂಶವೃಕ್ಷ ದೃಢೀಕರಣ ಪತ್ರ;<br>
3. ಚಾಲ್ತಿ ಸಾಲಿನ ಪಹಣಿ ;<br>
4. ಆಧಾರ್ ಪ್ರತಿ ಮತ್ತು ದೂರವಾಣಿ ಸಂಖ್ಯೆ;</td></tr>
<tr><td>ಆ.</td><td>ವಿಲೇವಾರಿಯಾಗದೆ ಬಾಕಿ ಇರುವ ಪೌತಿ ಖಾತೆಗಳಿಂದ ರೈತರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾರಣಕ್ಕಾಗಿ ವಿಲೇವಾರಿ ಮಾಡದೇ ಬಾಕಿ ಉಳಿಸಿಕೊಳ್ಳಲಾಗಿದೆ; ಯಾವ ಕಾಲಮಿತಿಯೊಳಗೆ ವಿಲೇವಾರಿ ಮಾಡಿ ರೈತರಿಗೆ ಪೌತಿ ಖಾತೆ ಮಾಡಿಕೊಡಲಾಗುವುದು; (ವಿವರ ನೀಡುವುದು)</td><td>ಸ್ವೀಕೃತವಾದ ಪೌತಿ ಖಾತೆ ಬದಲಾವಣೆ ಅರ್ಜಿಗಳು ನಿಗದಿತ ಅವಧಿಯಲ್ಲಿ ವಿಲೇವಾರಿಯಾಗಿದ್ದು, ಬಾಕಿ ಇರುವುದಿಲ್ಲ.<br><br>
ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 26 ಎಲ್‌ಜಿಪಿ 2022, ದಿನಾಂಕ:29.09.2022ರಲ್ಲಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 64(3) ಹಾಗೂ ನಿಯಮ 66ಕ್ಕೆ ತಿದ್ದುಪಡಿ ತರಲಾಗಿದ್ದು, ನೋಂದಾಯಿತ ದಸ್ತವೇಜುಗಳ ಮ್ಯುಟೇಷನ್‌ಗೆ ಸಂಬಂಧಿಸಿದ ನೋಟೀಸು ಅವಧಿಯನ್ನು ಈ ಹಿಂದೆ ಇದ್ದ 30 ದಿನಗಳಿಂದ 7 ದಿನಗಳಿಗೆ ಹಾಗೂ ನೋಂದಾಯಿತವಲ್ಲದ ದಸ್ತಾವೇಜುಗಳ ಖಾತಾ ಬದಲಾವಣೆ ಮ್ಯುಟೇಷನ್ ಅವಧಿಯನ್ನು 15 ದಿನಗಳಿಗೆ ಪರಿಷ್ಕರಿಸಲಾಗಿದೆ. ಅದರನ್ವಯ ಪೌತಿ ಖಾತೆ ವರ್ಗಾವಣೆಯನ್ನು 15 ದಿನಗಳ ನೋಟೀಸು ಅವಧಿ ಮುಕ್ತಾಯಗೊಂಡ ಕೂಡಲೇ ಮಾಡಲಾಗುತ್ತಿದೆ.</td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ. | ಈ ನಿಟ್ಟಿನಲ್ಲಿ ಸರ್ಕಾರವು ಕೊಡಗು ಜಿಲ್ಲೆಯಲ್ಲಿ ಪೌತಿ ಖಾತೆ ಆಂದೋಲನ ನಡೆಸುತ್ತಿದೆಯೇ; ಹಾಗಿದ್ದಲ್ಲಿ ಇದರಿಂದ ಎಷ್ಟು ಜನ ಜನ ರೈತರಿಗೆ ಪೌತಿ ಖಾತೆ ಮಾಡಿಕೊಡಲಾಗಿದೆ ? (ತಾಲ್ಲೂಕುವಾರು ವಿವರ ನೀಡುವುದು) | ಹೌದು.<br>ಪೌತಿ ಖಾತೆ ಆಂದೋಲನದಲ್ಲಿ ಕೊಡಗು ಜಿಲ್ಲೆಯಲ್ಲಿ ಒಟ್ಟು 379 ಪ್ರಕರಣಗಳಲ್ಲಿ ರೈತರಿಗೆ ಪೌತಿ ಖಾತೆ ಮಾಡಿಕೊಡಲಾಗಿದೆ. |

| ಕ್ರ.ಸಂ. | ತಾಲ್ಲೂಕು | ಅರ್ಜಿಗಳ ಸಂಖ್ಯೆ |
|---|---|---|
| 1 | ಮಡಿಕೇರಿ | 28 |
| 2 | ವಿರಾಜಪೇಟೆ | 219 |
| 3 | ಸೋಮವಾರಪೇಟೆ | 88 |
| 4 | ಕುಶಾಲನಗರ | 22 |
| 5 | ಪೊನ್ನಂಪೇಟೆ | 22 |
| **ಒಟ್ಟು** | | **379** |

ಸಂಖ್ಯೆ:ಕಂಇ 172 ಟಿಆರ್‌ಎಂ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು